## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 820/2015

ಸಾಕ್ಷಿಗೆ ದಿನಾಂಕ 26-02-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 21 P.W.: 10

| | | |
|---|---|---|
| ಹೆಸರು | : | ಸಿ ನಾಗಪ್ಪ |
| ತಂದೆಯ ಹೆಸರು | : | ಚಿನ್ನಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಪಿ ಐ, ಬೆಳ್ಳಂದೂರು ಸಂಚಾರ ಪೋ ಠಾಣೆ |
| ವಾಸ ಸ್ಥಳ | : | ಬೆಂಗಳೂರು |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 04-11-2012 ರಿಂದ 31-01-2015 ರವರೆಗೆ ತಂಬ್ರಹಳ್ಳಿ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13-12-2014 ರಂದು ರಾತ್ರಿ 8 ಗಂಟೆ ಸಮಯದಲ್ಲಿ ಪಿರ್ಯಾದಿದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಠ-ಣಾ ಗುನ್ನ ನಂ 59/14 ರಂತೆ ಪ್ರ ವ ವರದಿಯನ್ನು ದಾಖಲಿಸಿಕೊಂಡು ನಮ್ಮ ಮೇಲಾದಿಕಾರಿಗಳಿಗೆ ಮತ್ತು ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ, ಸಾಕ್ಷಿಯು ಪ್ರವ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ 21 ಎಂದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 21 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ದಿಃ14-12-2014 ರಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಪಿರ್ಯಾದಿದಾರರು ತೋರಿಸಿದಂತಹ ಸ್ಥಳವನ್ನು ಪರಿಶೀಲಿಸಿ ಚಾಸಾ 2 ಮತ್ತು 3 ರ ಪಂಚರ ಸಮ್ಮುಖದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತೇವೆ. ಪಂಚನಾಮೆಯನ್ನು ಬೆ 9.15 ರಿಂದ 10.15 ರವರೆಗೆ ಜರುಗಿಸಿರುತ್ತೇನೆ. ಘಟನಾಯ ಸ್ಥಳದ ಕಚಾ ನಕಾಶೆಯನ್ನು ಪಡೆದಿರುತ್ತೇನೆ. ಪಿರ್ಯಾದುದಾರಳ ಮನೆಯ ಬಾಗಿಲನ್ನು ಕಬ್ಬಿಣದ ರಾಡಿನಿಂದ ಮುರಿದು ಒಳ ಪ್ರವೇಶಿಸಿ ಹಾಲಿನಿಂದ 2 ಕಬ್ಬಿಣದ ಗಾಡ್ರೆಜಿಗಳನ್ನು ಕಬ್ಬಿಣದ ರಾಡುಗಳಿಂದ ಮೀಟಿ ತೆಗೆದು ಚಿನ್ನ ಮತ್ತು ಬೆಳ್ಳಿ ಆಭರಣಗಳು ಹಾಗೂ ರೇಶ್ಮೆ ಸೀರೆಗಳನ್ನು ಕಳುವು ಮಾಡಿದ್ದು ಕಂಡುಬಂದಿರುತ್ತದೆ. ಪಂಚನಾಮೆಯನ್ನು ಹಂಪಸಾಗರ ಗ್ರಾಮದ ಪಿಯಾದಿದಾರರ ಮನೆಯಲ್ಲಿ ಜರುಗಿಸಿರುತ್ತೇನೆ ಸದರಿ ಪಂಚನಾಮೆ ಮತ್ತು ನಕಾಶೆಯನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 2 ಮತ್ತು 3 ಅಂತಾ ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಮತ್ತು 3 ಬಿ ಅಂತಾ ಗುರುತಿಸಲಾಯಿತು. ನಿಪಿ 4 ರಿಂದ 7 ಭಾವಚಿತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಂತರ ಅದೇ ದಿನ ಸಾಕ್ಷಿದಾರರಾದ ಚಾಸಾ 6, 7,9,10 ಮತ್ತು 8 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 22 ರವರಿಗೆ ಹಸ್ತಾಂತರಿಸಿರುತ್ತೇನೆ. ಮತ್ತು ಅವರ ತನಿಖೆಗೆ ನಾನು ಸಹಕರಿಸಿರುತ್ತೇನೆ. ನಾನು ಪಿರ್ಯಾದಿದಾರರ ಮರು ಹೇಳಿಕೆಯನ್ನು ಸಹ ಪಡೆದಿರುತ್ತೇನೆ.

ಪಾಟೀ ಸವಾಲು. 1 ನೇ ಆರೋಪಿ ಪರ ಶ್ರೀ ಪಿ ಆರ್ ವಕೀಲರಿಂದಃ-

ದಿ 12.12.2014 ರಂದು ಬೆ 7.00 ಗಂಟೆಯಿಂದ ಮರುದಿನ 13.12.2014 ರ ಬೆ 10.00 ಗಂಟೆಯ ಒಳಗಾಗಿ ಘಟನೆ ಆಗಿದೆ ಅಂತಾ ದಿನಾಂಕ 13.12.2014 ರಂದು ರಾತ್ರಿ 8.00 ಗಂಟೆಗೆ ದೂರುನ್ನು ನೀಡಿರುತ್ತಾರೆ. ಪಿರ್ಯಾದಿಯನ್ನು ಪಿರ್ಯಾದಿದಾರಳು ಟೈಪ್ ಮಾಡಿಸಿದ ಪಿರ್ಯಾದಿಯನ್ನು ನೀಡಿರುತ್ತಾರೆ. ಆ ಸಮಯದಲ್ಲಿ ಠಾಣೆಗೆ ಪಿರ್ಯಾದಿದಾರಳು ಮಾತ್ರ ಬಂದಿದ್ದಳು. ಪಿರ್ಯಾದಿ ದಾಖಲಾದ ಮರುದಿನ ಬೆಳಗ್ಗೆ 9.00 ಗಂಟೆ ಸಮಾರಿಗೆ ನಾನು ಘಟನೆ ಸ್ಥಳಕ್ಕೆ ಹೋಗಿರುತ್ತೇನೆ. ಪಂಚನಾಮೆಗೆ ಬರುವಂತೆ ಪಂಚರಿಗೆ ನಾನು ನೋಟೀಸನ್ನು ನೀಡಿಲ್ಲ . ನಾನು ತಂಬ್ರ ಹಳ್ಳಿ ಯಿಂದ ನೇರವಾಗಿ ಘಟನೆ ಸ್ಥಳಕ್ಕೆ ಹೋಗಿರುತ್ತೇನೆ . ಆ ಸಮಯದಲ್ಲಿ ನನ್ನ ಜೊತೆ ಚಾಸಾ 17, 18, 19 ರವರು ಇದ್ದರು. ನಿಪಿ 2 ಪಂಚನಾಮೆ ಬರೆಯಲು ಮಾಹಿತಿಯನ್ನು ಯಾರು ಕೊಟ್ಟರು ಎಂದರೆ ಸಾಕ್ಷಿಯು ಪಂಚರು ಹೇಳಿದ್ದನ್ನು ನಾನೇ ಪಂಚನಾಮೆ ಬರೆಯುವರಿಗೆ ಹೇಳಿರುತ್ತೇನೆ. ನಾನು ಆ ದಿನ ಯಾವುದೇ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಪಂಚನಾಮೆ ಜರುಗಿಸಿಲ್ಲ, ಸ್ಥಳದಲಿ ಪಂಚರು ಮತ್ತು ಪಿರ್ಯಾದಿದಾರರ ಸಹಿಯನ್ನು ಪಂಚನಾಮೆಗೆ ಪಡೆದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಜೊತೆ ಹಾಜರಿದ್ದ ನಿಮ್ಮ ಸಿಬ್ಬಂದಿಗಳ ಸಹಿಯನ್ನು ಪಂಚನಾಮೆಗೆ ಏಕೆ ಪಡೆದಿಲ್ಲ ಎಂದರೆ ಅದರ ಅವಶ್ಯಕತೆ ನನಗೆ ಅನಿಸಲಿಲ್ಲ ಎನ್ನುತ್ತಾರೆ. ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಜಪ್ತಿಮಾಡಿಲ್ಲ. ಸದರಿ ದಿನ ನಾನು ಒಂದೇ ಪಂಚನಾಮೆ ಮಾಡಿರುತ್ತೇನೆ. ಈ ಪ್ರಕರಣದಲ್ಲಿ ಸಿಪಿಐರವರು ಮಾಡಿರುವ ಪಂಚನಾಮೆಗೆ ನಾನು ಸಹಕರಿಸಿರುತ್ತೇನೆ. ನಾನು ಹಾಜರುಪಡಿಸಿದ ನಿಪಿ 3 ನಕಾಶೆ ತಪ್ಪು ಮಾಹಿತಿಯಿಂದ ಕೂಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ನಕಾಶೆಯನ್ನು ನಾನು ಘಟನಾಯ ಸ್ಥಳದಲ್ಲಿ ತಯಾರಿಸಿಲ್ಲ, ಪಂಚರು ಮತ್ತು ಪಿರ್ಯಾದಿಯ ಸಹಿಯನ್ನು ಘಟನಾಯ ಸ್ಥಳದಲ್ಲಿ ಪಡೆದಿಲ್ಲ. ಆ ದಿನ ನಾನು ಮನೆಗೆ ಸಂಬಂ ದಿಸಿದ ದಾಖಲಾತಿಯನ್ನು ಪರಿಶೀಲಸಿರುವುದಿಲ್ಲ ಎಂದರೆ ಸರಿ. ಅದೇರೀತಿ ನಿಪಿ 4 ರಿಂದ 7 ದಾಖಲಿಗಳನ್ನು ನಾನು ಸೃಷ್ಟಿ

ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆ, ನಕಾಶೆ ಹಾಗೂ ಭಾವಚಿತ್ರ ತೆಗೆದ ಬಗ್ಗೆ ಮತ್ತು ಸಿಪಿಐ ಅವರ ಜೊತೆ ಹೋಗಿ ಇನೊಂದು ಪಂಚನಾಮೆಗೆ ಸಹಕರಿಸಿದ ಬಗ್ಗೆ ಹೇಳಿಕೆ ನೀಡಿಲ್ಲ. ಪಿರ್ಯಾದಿದಾರರಿಗೆ ಅನುಕೂಲವಾಗಲು ಸುಳ್ಳು ದೂರನ್ನು ದಾಖಲಿಪಸಿಕೊಂಡು ತಪ್ಪು ಮಾಹಿತಿಯಿಂದ ಕೂಡಿದ ಪಂಚನಾಮೆಯನ್ನು ಸೃಷ್ಟಿಸಿ, ತಪ್ಪು ಮಾಹಿತಿಯಿಂದ ಕೂಡಿದ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರಳ ಯಾವುದೇ ಮರುಹೇಳಿಕೆ ಪಡೆದಿಲ್ಲ ಸದರಿ ಮರು ಹೇಳಿಕೆಯಲ್ಲಿರುವ ವಿಚಾರ ಸಂಪೂರ್ಣ ತಪ್ಪಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಮುಮಾಲಿಗು ಮತ್ತು ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಪಿರ್ಯಾದಿದಾರಳ ಮರು ಹೇಳಿಕೆ ಮತ್ತು ಸಾಕ್ಷಿ ದಾರಳ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕು 1 ನೇ ಆರೋಪಿಗೂ ಯಾವುದೇ ಸಂಬಂದ ಇಲ್ಲ.

ಪಾಟಿ ಸವಾಲು 2 ನೇ ಆರೋಪಿ ಪರ ಕೆಜೆ ವಕೀಲರಿಂದ.

ಆ ದಿನ ನಾನು ಈ ಪ್ರಕರಣಕ್ಕೆ ಸಂಬಂದಿಸಿದಂತೆ ನಿಪಿ 2 ಪಂಚನಾಮೆಯನ್ನು ಮಾತ್ರ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು ಘಟನಾಯ ಸ್ಥಳದ ಫೋಟೋಗಳನ್ನು ತೆಗೆದಿರುತ್ತೇನೆ. 2 ನೇ ಆರೋಪಿತನಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ. ಪಿರ್ಯುದಿದಾರಳು ನೀಡಿದ ಸುಳ್ಳು ದೂರಿನ ಅನ್ವಯ ಸುಳ್ಳು ಪ್ರಕರಣವನು ದಾಖಲಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದೆನೆ ಎಂದರೆ ಸರಿಯಲ್ಲ. ಮುಮಾಲಿಗೂ 2 ನೇ ಆರೋಪಿತನಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಪಾಟಿ ಸವಾಲು 3 ನೇ ಆರೋಪಿ ಪರ ಎಸ್ ಎನ್ ಬಿ ವಕೀಲರಿಂದ.

ಈ ಪ್ರಕರಣಕ್ಕೂ 3 ನೇ ಆರೋಪಿತನಿಗೂ ಯಾವುದೇ ಸಂಬಂದ ಇಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ